ಕೇಳಿದ್ದರು, "ನಿನ್ನ ಮನಸ್ಸಿನಲ್ಲಿ ಇವತ್ತು ನನ್ನನ್ನು ಉಪವಾಸ ಇಡುವ ಆಲೋಚನೆ ಇದೆಯೇ?"

ಅವರ ಈ ಪ್ರಶ್ನೆ ಕೇಳಿ ಸಾವಿತ್ರಿ ಎದೆ ಧಸಕ್ಕೆಂದಿತು. ಇವತ್ತು ಇವರು ಯಾಕೆ ಹೀಗೆ ವರ್ತಿಸುತ್ತಿದ್ದಾರೆ?

"ನೀವು ಊಟ ಮಾಡಿದ್ದೀರಲ್ಲ, ಆಗಲೇ ನಾನು ನಿಮಗೆ ಬಡಿಸಿದ್ದೇನೆ."

ಕನಿಷ್ಠ ಹತ್ತು ಬಾರಿ ಹೇಳಿದರೂ ಸಾವಿತ್ರಿಯ ಮಾತನ್ನು ಒಪ್ಪಿಕೊಳ್ಳಲು ಭಾವ್ರಾ ಸಿದ್ಧರಿರಲೇ ಇಲ್ಲ. ಕೊನೆಗೆ ಸಂಜೆ ನಾಲ್ಕು ಗಂಟೆಗೆ ಉಳಿದ ಅಡುಗೆಯನ್ನು ಭಾವ್ರಾಗೆ ಬಡಿಸುವ ಪ್ರಸಂಗ ಅವಳಿಗೆ ಬಂದಿತ್ತು. ಎಂಟು ದಿನ ಕಳೆದ ಬಳಿಕ ಮತ್ತೆ ಅದೇ ರೀತಿ ನಡೆಯಿತು. ಈ ಬಾರಿಯಂತೂ ಭಾವ್ರಾ ಮಕ್ಕಳ ಹಾಗೆ ಅಳುತ್ತಾ ಅವಳಲ್ಲಿ ಕೇಳಿದ್ದರು, "ಇತ್ತೀಚೆಗೆ ನೀನು ನನಗೆ ಊಟ ನೀಡದೆ ಉಪವಾಸ ಇರುವ ಹಾಗೆ ಮಾಡುತ್ತಿರುವೆಯಲ್ಲ. ಯಾಕೆ? ನಿನಗೆ ನಾನು ಬೇಡವಾದೇನೇ?"

ಗಂಡನ ಈ ಮಾತನ್ನು ಕೇಳಿ ಸಾವಿತ್ರಿಗೆ ಸಿಟ್ಟು ಬರುವ ಬದಲು ಆತಂಕವಾಯಿತು. ಇವರು ಯಾಕೆ ಹೀಗೆ ವರ್ತಿಸುತ್ತಿದ್ದಾರೆ? ಇವರಿಗೆ ಮರೆವು ಕಾಡುತ್ತಿರಬಹುದೇ. ಸಾವಿತ್ರಿ ತನ್ನ ಮನಸ್ಸಿನಲ್ಲಿ ಹುಟ್ಟಿದ ಈ ಪ್ರಶ್ನೆಯನ್ನು ಯಾರ ಬಳಿಯೂ ಪ್ರಸ್ತಾಪಿಸಲು ಹೋಗಲಿಲ್ಲ. ಅದನ್ನು ಹಾಗೆಯೇ ಮುಚ್ಚಿಟ್ಟಳು. ಅದರ ಸುಳಿವು ಮಗ ಸೊಸೆಗೆ ಸಿಗದ ಹಾಗೆ ನೋಡಿಕೊಂಡಳು. ಸುಮ್ಮನೆ ಅವರಿಗೆ ಯಾಕೆ ತಲೆ ಬಿಸಿ ಎಂದು ಅವಳ ಭಾವನೆ. ಆದರೆ, ಭಾವ್ರಾ ಸ್ಥಿತಿಯನ್ನು ಅವರಿಂದ ಹೆಚ್ಚು ದಿನ ಮುಚ್ಚಿಡುವುದು ಸಾವಿತ್ರಿಗೆ ಸಾಧ್ಯವಾಗಲಿಲ್ಲ.

ಭಾವ್ರಾ ಮೂರು ತಿಂಗಳ ಕರೆಂಟ್ ಬಿಲ್ ಅನ್ನು ಪಾವತಿಸಿರಲಿಲ್ಲ. ಹಾಗೆ ಪ್ರತಿ ತಿಂಗಳು ಬಿಲ್ ಬಂದ ಕೂಡಲೇ ಅವರು ಹಣ ಪಾವತಿಸಲು ಮನೆಯಿಂದ ಹೋಗುತ್ತಿದ್ದರು. ಆದರೆ, ಬಿಲ್ ಹಣ ತುಂಬಿಸದೆ ಹಿಂತಿರುಗಿ ಬರುತ್ತಿದ್ದರು. ಎಂದಿನ ಹಾಗೆ ಬಿಲ್ ಮಾತ್ರ ಫೈಲ್ ಸೇರುತ್ತಿತ್ತು. ವಿದ್ಯುತ್ ನಿಗಮದ ನೌಕರರು ವಿದ್ಯುತ್ ಸಂಪರ್ಕ ನಿಲ್ಲಿಸಲು ಮನೆಯ ಬಳಿ ಬಂದಾಗ ಭಾವ್ರಾ ಅವರ ವಿಚಿತ್ರ ನಡವಳಿಕೆ ಬೆಳಕಿಗೆ ಬಂತು. ಮಗ, ದೀಪಕ್ ತಂದೆಯ ಬಳಿ ಬಿಲ್ ಕುರಿತು ವಿಚಾರಿಸಿದಾಗ ಅವರು ಮಗನ ಮೇಲೆ ಸಿಕ್ಕಾಪಟ್ಟೆ ರೇಗಿದರು. ತಾನು ಯಾವುದೇ ಬಿಲ್ ಉಳಿಸಿಲ್ಲ, ಸಮಯಕ್ಕೆ ಸರಿಯಾಗಿ ಎಲ್ಲದರ ಹಣವನ್ನು ಕಟ್ಟಿದ್ದೇನೆ ಎಂದು ಹೇಳಿದರು. ಅವರ ಆವೇಶದ ಧ್ವನಿ ಕೇಳಿ ಯಾರಿಗೂ ಅನುಮಾನ ಬರಲಿಲ್ಲ. 'ಸರಿ, ಹಾಗಾದರೆ ಹಣ ಪಾವತಿಸಿದ ರಶೀದಿ ಇರಬೇಕಲ್ಲ ಅದನ್ನು ಕಚೇರಿಗೆ ಹೋಗಿ ತೋರಿಸಿದರಾಯಿತು' ಎಂದುಕೊಂಡು ಮಗ ಅವರ ಕೋಣೆಗೆ ಹೋಗಿ ಫೈಲ್

